ಗಮನ ಸೆಳೆಯುವ ಸೂಚನೆ

ಶ್ರೀಮತಿ ಮನೋರಮ ಮಧ್ವರಾಜ್.—ಅಧ್ಯಕ್ಷರೆ, ಉಡುಪಿಯ ಕಲ್ಸಂಕ ಬಳಿಯ ಬಾವಿ ಯೊಂದರಲ್ಲಿ ಅಪರಿಚಿತ ವ್ಯಕ್ತಿಯೊಬ್ಬರು ಸಂಶಯಾತ್ಮಕ ರೀತಿಯಲ್ಲಿ ಕೊಲೆಯಾಗಿರುವ ವಿಚಾರದ ಬಗ್ಗೆ ಗೃಹ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೆ,.....

ಶ್ರೀಮತಿ ಮನೋರಮ ಮಧ್ವರಾಜ್.—ಅಧ್ಯಕ್ಷರೆ, ನನಗೆ ಉತ್ತರದ ಕಾಪಿ ಬಂದಿರುವುದಿಲ್ಲ.

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೆ, ಇನ್ನೂ ಕಾಪಿ ಬಂದಿಲ್ಲ ಅನಂತರ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ನಮ್ಮ ಹತ್ತಿರ ಉತ್ತರ ಕಾಪಿ ಇಲ್ಲದೇ ಇದ್ದರೆ ವಿವರಣೆ ಯನ್ನು ಕೇಳಲಿಕ್ಕೆ ಆಗುವುದಿಲ್ಲ.

ಅಧ್ಯಕ್ಷರು.—ಹಾಗಾದರೆ ಇದನ್ನು ಅನಂತರ ತೆಗೆದುಕೊಳ್ಳೋಣ.

ಶ್ರೀ ಆರ್. ರಾಪಯ್ಯ.—ಅಧ್ಯಕ್ಷರೆ, ತೆಂಗಿನ ಬೆಳೆಗಳ ನಾಶದಿಂದಾಗಿ ಹಾಗೂ ತೊಂದರೆಗೀಡಾದ ರೈತರುಗಳಿಗೆ ಪರಿಹಾರ ನೀಡದಿರುವುದರಿಂದ ಯಳನಾಡು ಗ್ರಾಮದ ರೈತರಿಗೆ ಉಂಟಾಗಿರುವ ತೊಂದರೆಯ ವಿಚಾರದ ಬಗ್ಗೆ ವಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಅಧ್ಯಕ್ಷರು.—ತಮ್ಮ ಹತ್ತಿರ ಉತ್ತರದ ಕಾಪಿ ಬಂದಿದೆಯೇ ?

ಶ್ರೀ ಎಂ. ಆರ್. ರಾಮಯ್ಯ.—ಇನ್ನೂ ಕೊಟ್ಟಿಲ್ಲ.

ಅಧ್ಯಕ್ಷರು.—ಹಾಗಾದರೆ ಇವೆರಡನ್ನೂ, ನಿಯಮ ೩೩೪ ಆದ ನಂತರ ತೆಗೆದುಕೊಳ್ಳುತ್ತೇನೆ.

ನಿಯಮ 334ರ ಮೇರೆಗೆ

(i) ಬಡತನ ರೇಖೆಯ ಕೆಳಗೆ ಇರತಕ್ಕವರಿಗೆ, ಅಕ್ಕಿ ಹಾಗೂ ಸೀರೆಗಳನ್ನು ವಿತರಣೆ ಮಾಡುವುದು.

ಶ್ರೀಮತಿ ಮನೋರಮ ಮಧ್ವರಾಜ್.—ಅಧ್ಯಕ್ಷರೆ, ತೀರ ಜಡವರಾದವರಿಗೆ ಎರಡೂ ರೂಪಾಯಿಗೆ ಒಂದು ಕಿ.ಲೋ. ಅಕ್ಕಿ ಮತ್ತು ಕಡಿಮೆ ಬೆಲೆಯಲ್ಲಿನ ಸೀರೆ–ಧೋತಿ ನೀಡುವ ಸರಕಾರದ ಘೋಷಿತ ಕಾರ್ಯಕ್ರಮದಂತೆ, ಪ್ರಯೋಜನ ಹೊಂದುವ ಅರ್ಹ ಫಲಾನುಭವಿಗಳನ್ನು ಗುರುತಿಸುವ ಕೆಲಸ ಈಗ ನಡೆಯುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ (ಐ.ಆರ್.ಡಿ.ಪಿ.) ಫಲಾನುಭವಿಗಳಿಗೆ ಮಾತ್ರ ಈ ಸವಲತ್ತು ಸೀಮಿತವಾಗಿರುವುದೆಂದು ತಿಳಿದು ಬಂದಿದೆ. ಐ.ಆರ್.ಡಿಪಿ. ಯೋಜನೆ ಸಾಲ ಸಬ್ಸಿಡಿ ಸವಲತ್ತು ಎಲ್ಲಾ ಕಡುಬಡವರಿಗೆ ಸಿಕ್ಕಿಲ್ಲ. ಸವಲತ್ತು ಸಿಕ್ಕಿದ ಕೆಲವರಿಗೇ ಪುನಃ ಅಕ್ಕಿ, ಸೀರೆ, ಧೋತಿಯ ನೆರವು ಲಭ್ಯವಾಗುತ್ತಿದೆ. ಇದರಿಂದಾಗಿ ಯಾವುದೇ ಸವಲತ್ತು ಈ ತನಕವೂ ದೊರಕದ ಕಡು ಬಡವರಿಗೆ ತುಂಬಾ ಅನ್ಯಾಯ ಮಾಡಿದಂತಾಗುತ್ತದೆ. ಇದನ್ನು ಸರಿಪಡಿಸಿ, ಎಲ್ಲಾ ಅರ್ಹ ಬಡವರಿಗೂ ಅಕ್ಕಿ, ಸೀರೆ, ಧೋತಿಯ ರಿಯಾಯಿತಿ ದರದ ಸೌಲಭ್ಯವನ್ನು ಸರಕಾರ ದೊರಕಿಸಿ ಕೊಡಬೇಕಾಗಿ ಕೋರುತ್ತೇನೆ.

ಶ್ರೀ ವಿ. ಎಲ್. ಪಾಟೀಲ್.—ಇದು ಹೊಸ ಸ್ಕೀಂ, ಇದೆ, ಇದನ್ನು ಇಂಪ್ಲಿಮೆಂಟ್ ಮಾಡುತ್ತಿದ್ದೇವೆ. ಮುಂದೆ ಇದರ ಬಗ್ಗೆ ಯಾರಿಗೆ ಎಕ್ಸ್‌ಟೆಂಡ್ ಮಾಡಬೇಕು, ಎನ್ನುವುದರ ಬಗ್ಗೆ ಫಂಡ್ ನೋಡಿಕೊಂಡು ಮಾಡುತ್ತೇವೆ.

(ii) ಭೂ ಮಂಸೂದೆ ಕಾನೂನು ರೀತ್ಯ ಗೇಣಿದಾರರಿಗೆ ಪಟ್ಟಾ ಕೊಡುವ ಬಗ್ಗೆ

ಶ್ರೀ ಕೆ. ವಸಂತ ಬಂಗೇರ.—ಕರ್ನಾಟಕ ರಾಜ್ಯದಲ್ಲಿ ಭೂ ಮಸೂದೆಯಂತೆ ಲ್ಯಾಂಡ್ ಟ್ರಿಬ್ಯೂ ನಲ್‌ಗಳ ಮುಖಾಂತರ ತೀರ್ಪು ನೀಡಿ ಮಾಜಿ ಗೇಣಿದಾರರನ್ನು ಪಟ್ಟಾದಾರರನ್ನಾಗಿ ಮಾಡಿರುತ್ತೀರಿ.